# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/13/15-16

ದಿನಾಂಕ :16-09-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀ ಕೆ. ರಾಮಂಜನೇಯಲು ತಂದೆ ಕೆ. ರಾಮಪ್ಪ ಅಲೀಯಸ್ ಸಣ್ಣ ರಾಮಣ್ಣ ಸಾ\|\| ಮೋಕಾ, ತಾ\|\| ಬಳ್ಳಾರಿ, ಜಿಲ್ಲಾ\|\| ಬಳ್ಳಾರಿ<br><br>(ಶ್ರೀ ಡಿ. ಮಲ್ಲಯ್ಯ, ವಕೀಲರು, ಬಳ್ಳಾರಿ. ) | 1. ತಹಶೀಲ್ದಾರರು, ಬಳ್ಳಾರಿ<br>2. ಕಂದಾಯ ನೀರಿಕ್ಷಕರು, ಮೋಕಾ.<br>3. ಗ್ರಾಮಲೆಕ್ಕಾಧಿಕಾರಿಗಳು, ಮೋಕಾ.<br>4. ಶ್ರೀಮತಿ. ಹನುಮಕ್ಕಾ ಗಂಡ ಲೇಟ್ ಹುಲುಗಪ್ಪ ಸಾ\|\| ಮೋಕಾ ಗ್ರಾಮ ತಾ\|\| ಬಳ್ಳಾರಿ ಜಿಲ್ಲಾ\|\| ಬಳ್ಳಾರಿ. |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಮೋಕಾ | 28B (P) | 0.50 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು,ಮೋಕಾ ಇವರ ಎಂ ಆರ್ ನಂ 126/1982-83 ದಿನಾಂಕ 18-09-1982 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ 18-12-2015, 11-03-2016, 16-09-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಮತ್ತು ಅವರ ಪರ ವಕೀಲರು ದಿನಾಂಕ: 16-09-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಮೋಕಾ ಗ್ರಾಮದ ಸ.ನಂ 28B (P) ವಿಸ್ತೀರ್ಣ: 0.50 ಎಕರೆ ಜಮೀನನ್ನು ನೊಂದಾಯಿತ ಕ್ರಯ ಪತ್ರ 2598/70-71 ದಿನಾಂಕ 12-08-1970 ರಲ್ಲಿ ಪ್ರತಿವಾದಿ (4) ರವರಿಂದ ಖರೀದಿಸಿದ್ದು, ಸದರಿ ಕ್ರಯ ಪತ್ರದಂತೆ ಹಕ್ಕುಬದಲಾವಣೆ ಸಂಖ್ಯೆ 126/1982-83 ದಿನಾಂಕ 18-09-1982 ರಲ್ಲಿ ಮೇಲ್ಮನವಿ ದಾರರಿಗೆ ಹಕ್ಕು ದಾಖಲಾಗಿರುತ್ತದೆ. ಆದರೆ ಪಹಣಿ ಬಂದಿರುವುದಿಲ್ಲ ಕಾರಣ ಸದರಿ ಕ್ರಯ ಪತ್ರದನ್ವಯ ಪಹಣಿಯಲ್ಲಿ ಹಕ್ಕು ದಾಖಲಿಸುವಂತೆ ಕೋರಿರುತ್ತಾರೆ.

:: ಆದೇಶ ::

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಬಳ್ಳಾರಿ ತಾಲ್ಲೂಕಿನ ಮೋಕಾ ಗ್ರಾಮದ ಸ.ನಂ 28B (P) ವಿಸ್ತೀರ್ಣ: 0.50 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಾದಿಗಳು ಸಲ್ಲಿಸಿರುವ ಮೇಲ್ಮನವಿಗೆ ಕುರಿತಂತೆ ಪ್ರಶ್ನಿತ ಆಸ್ತಿಯ ಆಕಾರ್ ಬಂದ್ ಹಾಗೂ ಚಾಲ್ತಿ ಭೂಮಿ ತಂತ್ರಾಂಶದಲ್ಲಿನ ಪಹಣಿಗಳ ಕ್ಷೇತ್ರ ಒಟ್ಟುಗೂಡಿಸಿ , ಅಪೀಲುದಾರರ ಖರೀದಿ ಪತ್ರದಂತೆ ಹೆಸರು ನಮೂದಿಸಲು ಅಗತ್ಯ ಪ್ರಸ್ತಾವನೆ ತಯಾರಿಸಿ ಈ ಪ್ರಾಧಿಕಾರದ ಅನುಮೋದನೆ ಪಡೆಯಲು ತಹಶೀಲ್ದಾರರು ಬಳ್ಳಾರಿ ಇವರಿಗೆ ಆದೇಶಿಸಿದೆ

ಈ ಆದೇಶವನ್ನು ಹೇಳಿ, ಬರೆಯಿಸಿ, ತಪ್ಪುಗಳನ್ನುತಿದ್ದಿ ದಿನಾಂಕ:16-09-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ,

ಸಹಾಯಕ ಆಯುಕ್ತರು,

ಬಳ್ಳಾರಿ.

ಪ್ರತಿಯನ್ನು : ವಾದಿ ಮತ್ತು ಪ್ರತಿವಾದಿಗಳಿಗೆ ಸಲ್ಲಿಸಿದೆ ಹಾಗೂ ತಹಶೀಲ್ದಾರರು ಬಳ್ಳಾರಿ ಇವರಿಗೆ ಮುಂದಿನ ಕ್ರಮಕ್ಕಾಗಿ